O.S. ನಂಬರಃ 25/2021

ಪಿ. ಡಬ್ಲ್ಯೂಃ 1

ದಿಃ10-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಬಿ.ಟಿ.ಎನ್ ರವರರಿಂದಃ

1 ರಿಂದ 4 ನೇ ಪ್ರತಿವಾದಿಯರು ಕಲ್ಯಾಣಿ ಎನ್ನುವವರ ಮಕ್ಕಳು ಎಂದರೆ ಸರಿ. ಕಾಮಣ್ಣ ವೆಂಕಟೇಶ ನಾಯಕ ಈತನಿಗೆ 3 ಮಕ್ಕಳಿದ್ದು, ಅವರ ಹೆಸರು ಯುಮುನಾ, ಕಲ್ಯಾಣಿ ಮತ್ತು ಚುಡಿಯಾ ಎಂದರೆ ಸರಿ. ಇವರೆಲ್ಲರೂ ಚಿಕ್ಕವರಿದ್ದಾಗಿನಿಂದ ಸಾಯುವತನಕ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ಯಮುನಾ ಇವರು ಮದುವೆಯಾದರೂ ಸಹ ಕಾಮಣ್ಣನ ಮನೆಯಲ್ಲಿಯೇ ವಾಸಮಾಡುತ್ತಿದ್ದಳು ಎಂದರೆ ಸರಿ. ಕಲ್ಯಾಣಿ ಇವರಿಗೆ ದಾವಾ ಆಸ್ತಿಗಳಲ್ಲಿ 1/3 ಅಂಶ ಹಕ್ಕು ಇರುತ್ತದೆ ಎಂದರೆ ಸರಿ. ಅದನ್ನು ಅವರಿಗೆ ಕೊಡಲು ನನಗೆ ಯಾವುದೇ ತಕರಾರು ಇರುವುದಿಲ್ಲ.

<u>ಪಾಟಿ ಸವಾಲುಃ</u> 5 ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರರಿಂದಃ

2. ದಾವಾ ಆಸ್ತಿಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಹೊನ್ನಗುಡಿ ಗ್ರಾಮದಲ್ಲಿರುತ್ತವೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ದಾಖಲೆಗಳು ಇರುತ್ತವೆ. ನಮ್ಮ ತಂದೆಯ ಪೂರ್ಣ ಹೆಸರು ದಾಮು ರಾಮಾ ನಾಯ್ಕ. ರಾಮುನ ಪೂರ್ಣ ಹೆಸರು ಗೊತ್ತಿರುವುದಿಲ್ಲ. ಹಾಗೂ ರಾಮಾನ ತಂದೆ ತಾಯಿ ಹೆಸರು

ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಮೂಲದಲ್ಲಿ ಕಾಮಣ್ಣ ನಾಯ್ಕ ಇವರ ಆಸ್ತಿಗಳಾಗಿದ್ದವು. ಕಾಮಣ್ಣನ ಮಕ್ಕಳು ಯಮುನಾ ಮತ್ತು ಕಲ್ಯಾಣಿ ಇರುತ್ತಾರೆ ಎಂದು ತೋರಿಸಲು ದಾಖಲೆಗಳು ಇರುತ್ತವೆ. ನಾನು ನ್ಯಾಯಾಲಯಲಕ್ಕೆ ಹಾಜರುಪಡಿಸಿರುತ್ತೇನೆ. ನನಗೆ 3 ಜನ ಮಕ್ಕಳು ಇದ್ದು, ಗುರುದಾಸ, ರೂಪಾ ಮತ್ತು ಸಾಗರ. ಗುರುದಾಸ ಕೂಲಿ ಕೆಲಸ ಮಾಡುತ್ತಾರೆ. ಆತನಿಗೆ 30 ವರ್ಷ ಇರಬಹುದು. ಅವರಿಗೆ ಮದುವೆಯಾಗಿರುತ್ತದೆ. ದಾವಾ ಆಸ್ತಿಗಳು ನಮ್ಮ ಕಬ್ಜೆಯಲ್ಲಿವೆ ಎಂದು ತೋರಿಸಲು ಮತ್ತು ನಾವು ದಾವಾ ಆಸ್ತಿಗಳಿಗೆ ಹೋಗಿ ಬರುತ್ತೇವೆ ಎಂದು ತೋರಿಸಲು ಕಾಗದ ಪತ್ರಗಳು ಇರುತ್ತವೆ. ನಾವು ಗುಡಿಗಾರಗಲ್ಲಿಯಲ್ಲಿರುತ್ತೇವೆ. ಗುಡಿಗಾರ ಗಲ್ಲಿ ಹೊನ್ನ ಗುಡಿಯಿಂದ ಸುಮಾರು 2 ಕಿ.ಮಿ ದುೂರವಾಗುತ್ತದೆ. ಕುಟುಂಬದ ಪರವಾಗಿ ದಾವಾ ಆಸ್ತಿಗಳನ್ನು ಚೂಡಿಯಾ ಕಾಮಣ್ಣ ನಾಯ್ಕ ಇತನಿಗೆ ಕೊಟ್ಟಿರುತ್ತಾರೆ ಎಂದು ತೋರಿಸಲು ದಾಖಲಾತಿಗಳು ಇರುತ್ತವೆ. ಮನೆಯೂ ಸಹ ಇರುತ್ತದೆ. ಮನೆಯಲ್ಲಿ ಪಾಲು ಕೇಳಿರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.